ವಿಧಾನ ಪರಿಷತ್ ಮಾನ್ಯ ಸದಸ್ಯರಾದ ಶ್ರೀ ಡಿ.ಎಸ್.ಅರುಣ್ ರವರು
**ಶೂನ್ಯವೇಳೆಯಲ್ಲಿ ಮಂಡಿಸಿರುವ ಪ್ರಸ್ತಾವನೆಗೆ ಉತ್ತರ**

ಪ್ರಶ್ನೆ: 2021ರಲ್ಲಿ ಶಿವಮೊಗ್ಗ ಜಿಲ್ಲೆಯನ್ನು ಬೆಚ್ಚಿ ಬೀಳಿಸಿದ್ದ ಹುಣಸೋಡು ಜಿಲೆಟಿನ್ ಸ್ಫೋಟ ಪ್ರಕರಣದಲ್ಲಿ ಭಾಗಿಯಾಗಿದ್ದಾರೆಂದು ಹೇಳಲ್ಪಡುವ ಹಾಗೂ ಈವರೆಗೂ ಪತ್ತೆಯಾಗದ ಭದ್ರಾವತಿ ನಿವಾಸಿಗಳಾದ ಶಶಿ, ನಾಗರಾಜ್ ಮತ್ತು ಪುನೀತ್ ಅವರನ್ನು ಹುಡುಕಿಸಿಕೊಡುವಂತೆ ವಿನಂತಿಸಿ ಈ ಮೂವರು ಪೋಷಕರು ನನ್ನನ್ನು ಭೇಟಿ ಮಾಡಿಕೊಂಡಿದ್ದು, ಸದರಿ ವಿಷಯ ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ.

ಕೂಲಿ ಕೆಲಸಕ್ಕೆಂದು ಈ ಮೂವರು ಹುಣಸೋಡು ಗಣಿಗಾರಿಕೆ ಸ್ಥಳಕ್ಕೆ ಬಂದಿದ್ದರು. ಸ್ಫೋಟ ನಂತರ ಈ ಮೂವರು ನಾಪತ್ತೆಯಾಗಿದ್ದರು ಈವರೆಗೂ ಇವರನ್ನು ಪತ್ತೆ ಮಾಡಲು ಆಗುತ್ತಿಲ್ಲ. ಈ ಮೂವರು ಬದುಕಿದ್ದಾರೋ ಅಥವಾ ಇಲ್ಲವೋ ಎನ್ನುವುದು ಸ್ಪಷ್ಟವಾಗುತ್ತಿಲ್ಲ. ಒಂದುವೇಳೆ ಈ ಮೂವರು ಸಾವು ಕಂಡಿದ್ದರೆ ಅದು ಸ್ಪಷ್ಟವಾಗಬೇಕಿದೆ. ಸ್ಪಷ್ಟತೆ ನಂತರ ಈ ಮೂವರ ಕುಟುಂಬಗಳಿಗೆ ಪರಿಹಾರ ಸಿಗುತ್ತದೆ. ಯಾವುದಕ್ಕೂ ಸತ್ಯ ಏನು ಎನ್ನುವುದು ಬಯಲಿಗೆ ಬರಬೇಕಿದೆ.

ಹುಣಸೋಡು ಕಲ್ಲುಕ್ವಾರಿಯಲ್ಲಿ ಸಂಭವಿಸಿದ ಸ್ಫೋಟ ಪ್ರಕರಣ ಸಂಬಂಧ ಎರಡು ವರ್ಷದ ಬಳಿಕ ಮತ್ತೊಂದು ಪ್ರಕರಣ ದಾಖಲಾಗಿದೆ. ನಕಲಿ ಕಾಲ್ ಡಿಟೇಲ್ ರೆಕಾರ್ಡ್ (ಸಿಡಿಆರ್) ಒದಗಿಸಲಾಗಿದೆ ಎಂದು ಪೊಲೀಸರು ಸ್ವಯಂ ಪ್ರೇರಿತವಾಗಿ **(Suo moto)** ದೂರು ದಾಖಲಿಸಿಕೊಂಡಿದ್ದಾರೆ.

ಜಿಲ್ಲೆಯಲ್ಲಿ ಹುಣಸೋಡು ಸ್ಫೋಟದ ಪ್ರಕರಣದ ನಂತರ ಜಲ್ಲಿಕಲ್ಲು ಉತ್ಪಾದಿಸುವ ಕ್ರಷರ್ ಘಟಕಗಳು ಮುಚ್ಚಿಹೋಗಿದ್ದು, ಹೀಗಾಗಿ ಹೊನ್ನಾಳಿ ಇನ್ನಿತರ ಕಡೆಗಳಿಂದ ಜಲ್ಲಿಕಲ್ಲುಗಳನ್ನು ತರಿಸಲಾಗುತ್ತಿದೆ.

ದಯಮಾಡಿ ಸರ್ಕಾರ ಹುಣಸೋಡಿನ ಜಿಲೆಟಿನ್ ಸ್ಫೋಟ ಪ್ರಕರಣದ ಬಗೆಗಿನ ಸತ್ಯಾಸತ್ಯತೆಯನ್ನು ಹೊರಗೆ ತರಬೇಕು. ಒಟ್ಟಾರೆ ಈ ಪ್ರಕರಣದಲ್ಲಿ 8 ಜನರು ಸಾವನ್ನಪ್ಪಿರುವ ಶಂಕೆ ಇದ್ದು, 5 ಜನರ ಬಗ್ಗೆ ಮಾಹಿತಿ ಸಿಕ್ಕಿದೆ. ಉಳಿಕೆ 3 ಜನರು ಸತ್ತಿದ್ದಾರೋ ಬದುಕಿದ್ದಾರೋ ಎನ್ನುವ ಬಗ್ಗೆ ಮಾಹಿತಿ ಇಲ್ಲ. ಪತ್ತೆಯೂ ಆಗಿಲ್ಲ. ಒಂದುವೇಳೆ ಸತ್ತಿದ್ದರೆ ಅವರಿಗೆ ಸೂಕ್ತ ಪರಿಹಾರವನ್ನು ಸರ್ಕಾರ ಒದಗಿಸಬೇಕು ಅಥವಾ ಅವರು ಬದುಕಿದ್ದಲ್ಲಿ ಅವರು ಎಲ್ಲಿದ್ದಾರೆ ಎನ್ನುವ ಬಗ್ಗೆ ಆಳವಾದ ತನಿಖೆಯಾಗಬೇಕು. ಸಂಬಂಧಪಡದ ಇಲಾಖೆಗಳಿಂದ ನೆಪಮಾತ್ರಕ್ಕೆ ತನಿಖೆಯಾದರೆ ಆಗುವುದಿಲ್ಲ. ಇಂತಹ ಪ್ರಕರಣಗಳಲ್ಲಿ ಸಂಬಂಧಪಟ್ಟ ಗೃಹ ಇಲಾಖೆಯ ನುರಿತ ತಂಡದ ವಿಭಾಗದಿಂದ ತನಿಖೆಗೆ ಆದೇಶಿಸಬೇಕು. ಮಾಹಿತಿಯನ್ನು ಹೊರಗೆ ತಂದು ಈ ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಬೇಕೆಂಬುದರ ಕುರಿತು.

ಉತ್ತರ:

1. ಶಿವಮೊಗ್ಗ ಜಿಲ್ಲೆಯನ್ನು ಬೆಚ್ಚಿ ಬೀಳಿಸಿದ್ದ ಹುಣಸೋಡು ಜಿಲೆಟಿನ್ ಸ್ಫೋಟ ಪ್ರಕರಣವು ದಿನಾಂಕ:21.01.2021 ರಂದು ರಾತ್ರಿ 10-20 ಗಂಟೆಗೆ ಶಿವಮೊಗ್ಗ ತಾಲ್ಲೂಕು ಕಲ್ಲಗಂಗೂರು ಗ್ರಾಮದ ಸರ್ವೆ ನಂ.2 ರಲ್ಲಿ ಸ್ಫೋಟ ಸಂಭವಿಸಿದ್ದು, ದಿನಾಂಕ:22.01.2021 ರಂದು ಬೆಳಗಿನ ಜಾವ 2-20 ಗಂಟೆಗೆ ಪಿಎಸ್ಐ, ಶ್ರೀ ಮಂಜುನಾಥ ರವರು ನೀಡಿದ ಸ್ವ-ದೂರಿನ ಆಧಾರದ ಮೇರೆಗೆ ಶಿವಮೊಗ್ಗ ಗ್ರಾಮಾಂತರ ಠಾಣೆ ಪ್ರಕರಣ ಸಂಖ್ಯೆ 24/2021. ಕಲಂ. 9(B) Explosive Act, 1884. & 5 Explosive Substances Act 1908 & 286, 304 IPC ರೀತ್ಯಾ ಪ್ರಕರಣ ದಾಖಲಾಗಿರುತ್ತದೆ.
2. ಸ್ಫೋಟವಾದ ಸಂಧರ್ಭದಲ್ಲಿ ಮೃತರಾದ 5 ವ್ಯಕ್ತಿಗಳ ಗುರುತು ಪತ್ತೆಯಾಗಿದ್ದು, (1) ಮೋಪುರಿ ಪವನ @ ಪವನ್‌ಕುಮಾರ್ (2) ಜಮ್ಮಾಜಾವೀದ್ (3) ಚೆಲಿಮಾನ ರಾಜು (4) ಪ್ರವೀಣ್ ಕುಮಾರ್ (5) ಮಂಜುನಾಥ ಆಗಿರುತ್ತಾರೆ.
3. ನಂತರ ತನಿಖೆಯನ್ನು ಐಜಿಪಿ, ಪೂರ್ವ ವಲಯರವರ ಆದೇಶದ ಮೇರೆಗೆ ಪೊಲೀಸ್ ಇನ್ಸ್‌ಪೆಕ್ಟರ್, ಸಿಇಎನ್ ಪೊಲೀಸ್ ಠಾಣೆ ಶಿವಮೊಗ್ಗರವರು ವಹಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.
4. ದಿನಾಂಕ:05.02.2021 ರಂದು ಆರೋಪಿ 1 ಮತ್ತು 2 ರವರನ್ನು, ದಿನಾಂಕ:25.01.2021 ರಂದು 10, 13, 14 ಮತ್ತು 15 ಆರೋಪಿಗಳನ್ನು, ದಿನಾಂಕ:04.02.2021 ರಂದು 11 ಮತ್ತು 12ನೇ ಆರೋಪಿತರನ್ನು ದಿನಾಂಕ:08.02.2021 ರಂದು 3ನೇ ಆರೋಪಿಯನ್ನು, ದಿನಾಂಕ:13.02.2021 ರಂದು 4ನೇ ಆರೋಪಿಯನ್ನು ದಸ್ತಗಿರಿ ಮಾಡಿ ವಿವರವಾದ ವಿಚಾರಣೆ ಕೈಗೊಂಡು ನ್ಯಾಯಾಲಯದ ಮುಂದೆ

ಹಾಜರುಪಡಿಸಿರುತ್ತಾರೆ. ಉಳಿದ ಆರೋಪಿತರಲ್ಲಿ ಮೃತರಾದ (1)ಮೋಪುರಿ ಪವನ @ ಪವನ್‌ಕುಮಾರ್ 5ನೇ ಆರೋಪಿ (2)ಚಮ್ಮಾಜಾವೀದ್ 6ನೇ ಆರೋಪಿ (3) ಚೆಲಿಮಾನರಾಜು 7ನೇ ಆರೋಪಿ(4) ಪ್ರವೀಣ್‌ಕುಮಾರ್ 8ನೇ ಆರೋಪಿ (5) ಮಂಜುನಾಥ 9ನೇ ಆರೋಪಿ(6) ಶಶಿ @ ದೇವೇಂದ್ರ 16ನೇ ಆಗಿರುತ್ತಾರೆ.

5. ದಸ್ತಗಿರಿ ಮಾಡಿದ ಆರೋಪಿಗಳಲ್ಲಿ ಎ1 ಪಿ.ಶ್ರೀರಾಮುಲು, ಎ2 ಮಂಜುನಾಥ ಸಾಯಿ, ಎ3 ಪೃಥ್ವಿನಾಥ್ ಸಾಯಿ ಮತ್ತು ಎ10 ಬಿ.ವಿ.ಸುಧಾಕರ್‌ರವರು ಬಂಧಿತರಾಗಿ ಹಾಲಿ ನ್ಯಾಯಾಂಗ ಬಂಧನದಲ್ಲಿರುವುದರಿಂದ ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿ ದಿನಾಂಕ:20.04.2021 ರಂದು ನ್ಯಾಯಾಲಯಕ್ಕೆ ಮಧ್ಯಂತರ ದೋಷಾರೋಪಣಾ ಪಟ್ಟಿ ಸಲ್ಲಿಸಲಾಗಿದ್ದು, ಪ್ರಕರಣವು ಪ್ರಸ್ತುತ ಎಸ್‌ಸಿ ನಂ.87/2021 ರಲ್ಲಿ ಮಾನ್ಯ 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗದಲ್ಲಿ ದಿನಾಂಕ:09.08.2023 ರಂದು ಹೆಚ್.ಬಿ.ಸಿಗಾಗಿ ಬಾಕಿ ಇರುತ್ತದೆ.
6. ಸಿಆರ್‌ಪಿಸಿ ಕಲಂ.173(8) ಪ್ರಕಾರ ಪ್ರಕರಣದಲ್ಲಿ ತನಿಖೆ ಮುಂದುವರೆಸಲು ಅನುಮತಿ ಪಡೆದು ತನಿಖೆ ಕೈಗೊಂಡು ದಿನಾಂಕ:03.03.2022 ರಂದು ಎ-ಅಂತಿಮ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ.
7. ಹೊಸಮನೆ ಶಿವಾಜಿ ಸರ್ಕಲ್ ಪೊಲೀಸ್ ಠಾಣೆ ಪ್ರಕರಣ ನಂ.19/2021 ಕಲಂ. ಮನುಷ್ಯ ಕಾಣೆ ಪ್ರಕರಣವು ದಿನಾಂಕ:20.02.2021 ರಂದು ನಾಗರಾಜ ಬಿನ್ ರಂಗಪ್ಪ ಈತನು ಕಾಣೆಯಾದ ಬಗ್ಗೆ ಆತನ ಮಗ ವಿಶ್ವನಾಥ್‌ರವರು ದೂರು ನೀಡಿದ್ದು, ಪತ್ತೆ ಕಾರ್ಯಚಾಲ್ತಿಯಲ್ಲಿರುತ್ತದೆ.
8. ಹೊಸಮನೆ ಶಿವಾಜಿ ಸರ್ಕಲ್ ಪ್ರಕರಣ ಸಂಖ್ಯೆ 20/2021 ಪ್ರಕರಣದಲ್ಲಿ ಕಾಣೆಯಾಗಿದ್ದ ದೇವೇಂದ್ರ @ ಶಶಿ ಬಿನ್ ಚಿಕ್ಕಬೋರೇಗೌಡ ಈತನು ಶಿವಮೊಗ್ಗ ಗ್ರಾಮಾಂತರ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ 24/2021 ರಲ್ಲಿ ಕಾಣೆಯಾದ ಎ16 ದೇವೇಂದ್ರ @ ಶಶಿ ಈ ಘಟನೆಯಲ್ಲಿ ಮೃತಪಟ್ಟಿರುವುದು ಡಿ.ಎನ್.ಎ. ಪರೀಕ್ಷೆಯಿಂದ ಸಾಬೀತಾಗಿರುತ್ತದೆ.
9. ಹೊಸಮನೆ ಶಿವಾಜಿ ಸರ್ಕಲ್ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ 21/2021 ಕಲಂ ಮನುಷ್ಯ ಕಾಣೆ ಪ್ರಕರಣವು ದಿನಾಂಕ:20.02.2021 ರಂದು ಪುನೀತ ಬಿನ್ ಲೇ||ಸಿತಾರಾಮ ಈತನು ಕಾಣೆಯಾದ ಬಗ್ಗೆ ಆತನ ತಾಯಿ ಶ್ರೀಮತಿ ರಾಜಮ್ಮ ರವರು ದೂರು ನೀಡಿದ್ದು, ಪತ್ತೆ ಕಾರ್ಯ ಚಾಲ್ತಿಯಲ್ಲಿರುತ್ತದೆ.
10. ಶ್ರೀಮತಿ ರಾಜಮ್ಮ ಕೋಂ ಸೀತಾರಾಂ ಇವರ ಮಗ ಪುನೀತ ಕಾಣೆಯಾದ ಬಗ್ಗೆ ದೂರು ಅರ್ಜಿ ನೀಡಿದ್ದು, ಅರ್ಜಿ ವಿಚಾರಣೆಯಲ್ಲಿ ಪುನೀತ್ ಉಪಯೋಗಿಸಿದ ಮೊಬೈಲ್ ನಂಬರಿನ ನಕಲಿ ಸಿಡಿಆರ್ ಸೃಷ್ಟಿಸಿರುವ ಬಗ್ಗೆ ಶ್ರೀ ಅಭಯ್ ಪ್ರಕಾಶ್ ಸೋಮನಾಳ್, ಪಿಐ ರವರು ನೀಡಿದ ಸ್ವ-ದೂರಿನ ಮೇರೆಗೆ ದಿನಾಂಕ: 31.01.2023 ರಂದು 15.30 ಗಂಟೆಗೆ ಶಿವಮೊಗ್ಗ ಗ್ರಾಮಾಂತರ ಠಾಣೆ ಪ್ರಕರಣ ಸಂಖ್ಯೆ 29/2023, ಕಲಂ.465, 468, 471 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ. ಸದರಿ ಪ್ರರಕಣವು ತನಿಖೆಯಲ್ಲಿರುತ್ತದೆ.
11. ಮೇಲಿನ ಎಲ್ಲಾ ಪ್ರಕರಣಗಳ ಸಂಪೂರ್ಣ ಮಾಹಿತಿಯನ್ನು **ಅನುಬಂಧ-ಅ** ದಲ್ಲಿ ನೀಡಲಾಗಿದೆ.

---

**ಹೆಚ್‌ಡಿ** 199 ಕೆಎಎ 2023

(ಡಾ: ಜಿ.ಪರಮೇಶ್ವರ)
ಗೃಹಸಚಿವರು

## ಅನುಬಂಧ-ಅ

### ಹುಣಸೋಡು ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದ ದಾಖಲಾದಪ್ರಕರಣದ ಮಾಹಿತಿ

| ಕ್ರ ಸಂ | ಠಾಣೆ ಗುನ್ನೆ ನಂ. ಮತ್ತು ಕಲಂ | ಪಿರ್ಯಾಧಿ | ಕೃನ. ದಿ ವರಧಿ ದಿ : & ಸ್ಥಳ | ನೊಂದವರು/ ಮೃತಪಟ್ಟವರು | ಆರೋಪಿತರು | ಕೇಸಿನ ಸಾರಾಂಶ | ಪ್ರಸ್ತುತ ಹಂತ |
|---|---|---|---|---|---|---|---|
| 1 | ಶಿವಮೊಗ್ಗ ಗ್ರಾಮಾಂತರ ಠಾಣೆ ಗುನ್ನೆ ನಂ:24/2021. ಕಲಂ.9(B) Explosive Act, 1884. & 5 Explosive Substances Act 1908 & 286, 304 IPC. | ಶ್ರೀ ಮಂಜುನಾಥ ಪಿಎಸ್ಐ. ಶಿವಮೊಗ್ಗ ಗ್ರಾಮಾಂತರ ಠಾಣೆ. | ಕೃ.ನ.ದಿ ದಿ:21-01-2021 ರಂದು 19-00 ಗಂಟೆಗೆ,<br><br>ಕೃವರದಿ ದಿ:22-01-2021 ರಂದು 23-45 ಗಂಟೆಗೆ.<br><br>ಸ್ಥಳ-ಶಿವಮೊಗ್ಗ ತಾಲ್ಲೂಕುಕಲ್ಲಗಂಗೂರು ಗ್ರಾಮ, ಸ.ವೆ.ನಂ:2 ರಲ್ಲಿ. ಎಸ್.ಎಸ್. ಸ್ಟೋನ್‌ಕ್ರಷರ್ | ಮೃತಪಟ್ಟವರು-<br>1)ಪ್ರವೀಣ್‌ಕುಮಾರ್ ಬಿನ್ ಸುರೇಶ್‌ಕುಮಾರ್<br>2)ಮಂಜುನಾಥ ಬಿನ್ ಬೋರೇಗೌಡ<br>3)ಮಾಪುರಿ ಪವನ<br>4)ರಾಜು ಬಿನ್ ಶೀನಪ್ಪ<br>5)ಜಾವೀದ್ ಬಿನ್ ಮಹಮ್ಮದ್‌ಇಕ್ಬಾಲ್ | 1.ಪಿ.ಶ್ರೀರಾಮುಲು<br>2.ಮಂಜುನಾಥ ಸಾಯಿ,<br>3.ಪಿ. ಪೃಶ್ವಿನಾಥ ಸಾಯಿ<br>4.ಕೆ.ವಿಜಯ ಕುಮಾರ<br>5.ಮೋಪುರಿ ಪವನ<br>6.ಚಮ್ಮಾ ಜಾವೀದ್<br>7.ಚಾಲಿಮಾನುರಾಜು<br>8. ಪ್ರವೀಣಕುಮಾರ<br>9.ಮಂಜುನಾಥ<br>10 ಬಿ.ವಿ ಸುಧಾಕರ<br>11 ಎಸ್.ಟಿ. ಕುಲಕರ್ಣಿ<br>12 ಅವಿನಾಶ ಕುಲಕರ್ಣಿ<br>13 ಮುಮ್ತಾಜ್‌ಅಹ್ಮದ್,<br>14 ರಶೀದ್,<br>15 ನರಸಿಂಹ | ದಿ:21-01-2021 ರಂದುರಾತ್ರಿ 10-20 ಗಂಟೆ ಸಮಯದಲ್ಲಿ ಕಲ್ಲಗಂಗೂರು ಗ್ರಾಮದ ಸ.ನಂ: 02 ರಲ್ಲಿ ಶ್ರೀ ಅವಿನಾಶ್ ಕುಲಕರ್ಣಿ 45ವರ್ಷ, ಇವರ ಮಾಲಿಕತ್ವದಲ್ಲಿ ಒಟ್ಟು 22 ಎಕರೆ ಮಾವಿನ ಗಿಡದ ಪ್ಲಾಟ್ ಇದ್ದು ಇದರಲ್ಲಿ 5 ಎಕರೆ ಜಾಗವನ್ನು ಸುಧಾಕರ ಬಿ.ವಿ. 57 ವರ್ಷ, ಇವರಿಗೆ 4 ವರ್ಷಗಳ ಹಿಂದೆ ಎಂ ಸ್ಯಾಂಡ್ ಕ್ರಷರ್ ನಡೆಸಲು ಭೋಗ್ಯಕ್ಕೆ ನೀಡಿದ್ದು ಸುಧಾಕರ್‌ರವರು ಇಲಿ ಎಸ್.ಎಸ್. ಸ್ಟೋನ್ ಕ್ರಷರ್‌ನ್ನು ಪರವಾನಿಗೆ ಪಡೆದುಕೊಂಡು ಎಂ. ಸ್ಯಾಂಡ್ ಕ್ರಷರ್ ನಡೆಸುತ್ತಿದ್ದು ಸದರಿ ಕ್ರಷರ್‌ನ ಹತ್ತಿರ ಆಕಸ್ಮಿಕವಾಗಿ ಸ್ಫೋಟ ಸಂಭವಿಸಿದ್ದು ಮಾಹಿತಿ ತಿಳಿದ ಕೂಡಲೆ ಪಿರ್ಯಾದಿ ಹಾಗೂ ಸಿಬ್ಬಂದಿಯವರು ಸದರಿ ಸ್ಥಳಕ್ಕೆ ಹೋಗಿ ನೋಡಲಾಗಿ ಒಂದು ವಾಹನ ಸಂಪೂರ್ಣ ಛಿದ್ರಗೊಂಡು ಬಿದ್ದಿದ್ದು, ಅಲ್ಲಿಂದ ಸತ್ತ 2 ಮೃತ ದೇಹಗಳು ಛಿದ್ರಗೊಂಡು ಬಿದ್ದಿದ್ದವು ಅಲ್ಲಿ ಅಕ್ಕಪಕ್ಕದ ಮರ ಗಿಡಗಳು ಕೂಡ ಛಿದ್ರಗೊಂಡಿದ್ದವು ಈ ಮಾಹಿತಿಯನ್ನು ಮೇಲಾಧಿಕಾರಿಗಳ ಗಮನಕ್ಕೆ ತಂದು ಸ್ಥಳದಲ್ಲಿ ಸೂಕ್ತ ಬಂದೋಬಸ್ತ್ ಮಾಡಲಾಗಿರುತ್ತದೆ ಎಂದು ಪಿರ್ಯಾದಿ ನೀಡಿದದೂರು. | ಎಸ್‌ಸಿ. 87/2021 ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿಇದ್ದು ಮುಂದಿನ ವಿಚಾರಣಾ ದಿನಾಂಕ:09-08-2023 ಕ್ಕೆ ಇರುತ್ತದೆ. |

### ನಕಲಿ ಸಿಡಿಆರ್‌ಗೆ ಸಂಬಂಧಿಸಿದಂತೆ ದಾಖಲಾದಪ್ರಕರಣದ ಮಾಹಿತಿ

| ಕ್ರ ಸಂ | ಠಾಣೆ ಗುನ್ನೆ ನಂ. ಮತ್ತು ಕಲಂ | ಪಿರ್ಯಾಧಿ | ಕೃನ. ದಿ ವರಧಿ ದಿ : & ಸ್ಥಳ | ಆರೋಪಿತರು | ಕೇಸಿನ ಸಾರಾಂಶ | ಪ್ರಸ್ತುತ ಹಂತ |
|---|---|---|---|---|---|---|
| 1 | ಶಿವಮೊಗ್ಗ ಗ್ರಾಮಾಂತರ ಠಾಣೆ ಗುನ್ನೆ ನಂ:29/2023. ಕಲಂ.465, 468, 471 ಐಪಿಸಿ | ಶ್ರೀ ಅಭಯ್ ಪ್ರಕಾಶ್ ಸೋಮನಾಳ್, ಪಿಐ, ಶಿವಮೊಗ್ಗ ಗ್ರಾಮಾಂತರಠಾಣೆ. | ಕೃ.ನ.ದಿ ದಿ:25-10-2021 ರಂದು 00-00 ಗಂಟೆಗೆ<br>ಕೃವರದಿ ದಿ:31-01-2023 ರಂದು 15-30 ಗಂಟೆಗೆ.<br>ಸ್ಥಳ: ಶಿವಮೊಗ್ಗ ಗ್ರಾಮಾಂತರ ಪೊಲೀಸ್‌ಠಾಣಾ ವ್ಯಾಪ್ತಿ. | ಯಾರೋ ಆರೋಪಿತರು | ಸುಮಾರು 1 ವರ್ಷ 3 ತಿಂಗಳ ಹಿಂದೆ ಶ್ರೀಮತಿ ರಾಜಮ್ಮ ಕೋಂ ಸೀತಾರಾಂ ಇವರು ತಮ್ಮ ಮಗನಾದ ಪುನೀತ, 31 ವರ್ಷರವರಿಗೆ ಸಂಬಂಧಿಸಿಂತೆ ಮೇಲಾಧಿಕಾರಿಗಳಿಗೆ ದೂರು ಅರ್ಜಿಯನ್ನು ನೀಡಿದ್ದು, ಸದರಿ ದೂರು ಅರ್ಜಿಗೆ ಸಂಬಂಧಿಸಿದಂತೆ ಡಿವೈಎಸ್‌ಪಿ, ಶಿವಮೊಗ್ಗ ಉಪ ವಿಭಾಗರವರು ವಿಚಾರಣೆ ಮಾಡಿರುತ್ತಾರೆ. ಅರ್ಜಿ ಜೊತೆ ನೀಡಿದ ದಾಖಲಾತಿಯನ್ನು ಪರಿಶೀಲನೆಗೆ ಮಾಡಿದಾಗ ಯಾರೋ ವ್ಯಕ್ತಿಗಳು ಸದರಿ ದಾಖಲಾತಿಯ ಒಂದು ಹಾಳೆಯನ್ನು ಪುನೀತ್‌ಗೌಡರವರ ಹೆಸರಿನ ಮೊಬೈಲ್ ನಂಬರ್ 8722222098 ನ ಒಂದು ಸಿಡಿಆರ್ ಪ್ರತಿ ಅಂತ ನೀಡಿರುತ್ತಾರೆ ಸದರಿ ಸಿಡಿಆರ್ ಪ್ರತಿ ಪರಿಶೀಲಿಸಿದಾಗ, ವಂಚಿಸುವ ಮತ್ತು ಮೋಸ ಮಾಡುವ ಉದ್ದೇಶದಿಂದ ಸಿಡಿಆರ್‌ನಂತೆ ನೈಜವೆಂದು ಸೃಷ್ಟಿಸಿ ನೀಡಿರುವುದು ಕಂಡು ಬಂದಿರುತ್ತದೆ, ಈಗಾಗಲೇ ಠಾಣಾ ಗುನ್ನೆ ನಂ.24/2021 ಪ್ರಕರಣದಲ್ಲಿ ಪುನೀತ್‌ರವರು ಬಳಸುತ್ತಿದ್ದ ಸಿಡಿಆರ್ ಪರಿಶೀಲಿಸಿದಾಗ ಅರ್ಜಿಯಲ್ಲಿರುವ ಸಿಡಿಆರ್ ನೈಜವಾಗಿ ಇಲ್ಲದೇ ಇರುವುದು ಕಂಡು ಬಂದಿರುತ್ತದೆ. ಯಾರೋ ಆರೋಪಿತರು ಸುಳ್ಳು ಸಿಡಿಆರ್ ಸೃಷ್ಟಿಸಿರುತ್ತಾರೆಂದು ದೂರು. | ಆರೋಪಿತರನ್ನು ಪತ್ತೆ ಮಾಡಲು ಬಾಕಿ ಇರುತ್ತದೆ. |

# ಮನುಷ್ಯಕಾಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಿಲಾದಪ್ರಕರಣಗಳ ಮಾಹಿತಿ

| ಕ್ರ. ಸಂ | ಠಾಣೆ ಗುನ್ನೆ ನಂ. ಮತ್ತು ಕಲಂ | ಪಿರ್ಯಾದಿ | ಕೃ.ನ. ದಿ ವರಧಿ ದಿ & ಸ್ಥಳ | ಕಾಣೆಯಾದವರು | ಕೇಸಿನ ಸಾರಾಂಶ | ಪ್ರಸ್ತುತ ಹಂತ |
|---|---|---|---|---|---|---|
| 1 | ಹೊಸಮನೆ ಠಾಣೆಗುನ್ನೆ ನಂ: 19/2021 ಕಲಂ: ಮನುಷ್ಯಕಾಣೆ | ವಿಶ್ವನಾಥ.ಎಂ ಬಿನ್ ನಾಗರಾಜ್, 21 ವರ್ಷ ವಾಸ: ಗೌರಪುರಗ್ರಾಮ ಭದ್ರಾವತಿತಾ | ಕೃ.ನ.ದಿ: 21-01-2021 ಗಂಟೆ 19-30 ಗಂಟೆಗೆ<br>ಕೃ.ವ.ದಿ: 20-02-2021 ರಂದು 18-00 ಗಂಟೆಗೆ<br>ಸ್ಥಳ: ಗೌರಪುರಗ್ರಾಮ ಭದ್ರಾವತಿತಾ ಪಿರ್ಯಾದಿ ಮನೆಯಿಂದ | ನಾಗರಾಜ್ ಬಿನ್ ರಂಗಪ್ಪ 43 ವರ್ಷ, | ಪಿರ್ಯಾದಿದಾರರ ತಂದೆ ಕಾಣೆಯಾದ ನಾಗರಾಜ್‌ರವರು ಬೇರೆ ಊರಿಗೆ ಹೋಗಿ ಬರುವುದಾಗಿ ಹೇಳಿ ಹೋಗಿದ್ದು ವಾಪಾಸ್ ಮನೆಗೆ ಬಾರದೆ ಇರುವ ಬಗ್ಗೆ. | ಈವರೆಗೆ ಕೈಗೊಂಡ ತನಿಖೆಯಿಂದ ಕಾಣೆಯಾದವರು ಪತ್ತೆಯಾಗದೇ ಇದ್ದು, ಪತ್ತೆಕಾರ್ಯ ಮುಂದುವರೆದಿದೆ. |
| 2 | ಹೊಸಮನೆ ಠಾಣೆಗುನ್ನೆ ನಂ: 20/2021 ಕಲಂ: ಮನುಷ್ಯಕಾಣೆ | ಚಿಕ್ಕ ಬೋರೇಗೌಡತಂದೆ ಬೋರೆಗೌಡ 56 ವರ್ಷ ವಾಸ: ಕೆ.ಹೆಚ್ ನಗರ ಸುಣ್ಣದ ಹಳ್ಳಿ ಗ್ರಾಮ ಭದ್ರಾವತಿತಾ | ಕೃ.ನ.ದಿ: 21-01-2021 ಗಂಟೆ 19-00 ಗಂಟೆಗೆ<br>ಕೃ.ವ.ದಿ: 20-02-2021 ರಂದು 19-15 ಗಂಟೆಗೆ<br>ಸ್ಥಳ: ಪಿರ್ಯಾದಿ ಮನೆಯಿಂದ | ದೇವೆಂದ್ರ .ಸಿ ಬಿನ್ ಚಿಕ್ಕ ಬೋರೇಗೌಡ 32 ವರ್ಷ | ಪಿರ್ಯಾದಿದಾರರ ಮಗ ಡ್ರೈವಿಂಗ್ ಕೆಲಸಕ್ಕೆ ಹೋಗುವುದಾಗಿ ಮನೆಯಲ್ಲಿ ತಿಳಿಸಿ ಹೋಗಿದ್ದು ವಾಪಾಸ್ ಮನೆಗೆ ಬಾರದೆಇರುವ ಬಗ್ಗೆ. | ದಿ:10-12-2022 ಎಂದು ಶಿವಮೊಗ್ಗ ಗ್ರಾಮಾಂತರಠಾಣೆಗುನ್ನೆ ನಂ:24/2021 ರ ಪ್ರಕರಣದಲ್ಲಿಡಿಎನ್ಎ ವರದಿ ಹಾಗೂ ವೈದ್ಯರ ಅಂತಿಮ ಅಭಿಪ್ರಾಯದ ವರದಿಯಲ್ಲಿ ಕಾಣೆಯಾದ ದೇವೆಂದ್ರ.ಸಿ ರವರ ದೇಹಕ್ಕೆ ಸಂಬಂದಿಸಿದ ಅಂಶವು ಪತ್ತೆಯಾಗಿದ್ದು, ಕಾಣೆಯಾದ ದೇವೆಂದ್ರ.ಸಿ ರವರು ದಿ:21-01-2021 ರ ಶಿವಮೊಗ್ಗ ತಾ, ಅಬ್ಬಲಗೆರೆ ಗ್ರಾಮದಲ್ಲಿ ನಡೆದ ಸ್ಫೋಟದಲ್ಲಿ ಮೃತಪಟ್ಟಿರುವುದರಿಂದ ದಾಖಲೆಯಿಂದ ದೃಢಪಟ್ಟಿರುತ್ತದೆ. |
| 3 | ಹೊಸಮನೆ ಠಾಣೆಗುನ್ನೆ ನಂ: 21/2021 ಕಲಂ: ಮನುಷ್ಯಕಾಣೆ | ಶ್ರೀ ರಾಜಮ್ಮ ಕೋಂ ಲೇ ಸೀತಾರಾಮ್ , 51 ವರ್ಷ ವಾಸ: ಬಸವನಗುಡಿಗ್ರಾಮ ಸುಣ್ಣದಹಳ್ಳಿ ಅಂಚೆ ಭದ್ರಾವತಿತಾ | ಕೃ.ನ.ದಿ: 21-01-2021 ಗಂಟೆ 15-30 ಗಂಟೆಗೆ<br>ಕೃ.ವ.ದಿ: 20-02-2021 ರಂದು 19-30 ಗಂಟೆಗೆ<br>ಸ್ಥಳ: ಪಿರ್ಯಾದಿ ಮನೆಯಿಂದ | ಪುನೀತ್‌ತಂದೆ ಲೇ ಸೀತಾರಾಮ್ 31 ವರ್ಷ | ಪಿರ್ಯಾದಿದಾರರ ಮಗ ಡ್ರೈವಿಂಗ್ ಕೆಲಸಕ್ಕೆ ಹೋಗುವುದಾಗಿ ಮನೆಯಲ್ಲಿ ತಿಳಿಸಿ ಹೋಗಿದ್ದು ವಾಪಾಸ್ ಮನೆಗೆ ಬಾರದೆಇರುವ ಬಗ್ಗೆ. | ಈವರೆಗೆ ಕೈಗೊಂಡ ತನಿಖೆಯಿಂದ ಕಾಣೆಯಾದವರು ಪತ್ತೆಯಾಗದೇ ಇದ್ದು, ಪತ್ತೆಕಾರ್ಯ ಮುಂದುವರೆದಿದೆ. |